ಸ್ಥಳಗಳೆಲ್ಲ ಒಂದಲ್ಲ ಒಂದು ಘಟನೆಗೆ ಸಾಕ್ಷಿಯಾಗಿದ್ದು, ತರ್ಕಕ್ಕೆ ಸಿಗದೇ ವಿಚಲಿತಗೊಳಿಸುತ್ತಿದ್ದವು. ಅವಳು ತನ್ನನ್ನ ಸ್ವೀಕರಿಸಿದಳು ಎಂಬುದೇ ನಿಗೂಢ ಸಂದೇಹ ಸೃಜಿಸುತ್ತಾ, ಅಂತಹ ಪುರಾವೆಯ ಒಂದೆಳೆಯೂ ಇಲ್ಲದಂತೆ ಅವಳಿಂದ ಸಿಗುವ ಪ್ರೀತಿಯ ಅಸ್ತಿತ್ವದೊಂದಿಗೆ ಸಂಘರ್ಷಿಸುತ್ತ ಹಿಂಸೆಪಡತೊಡಗಿದ. ರಾತ್ರಿ ಅವಳ ಒಡನಾಟದಲ್ಲಿ ಕರಗಿ ನೀರಾಗಿ ಎಲ್ಲ ಲಯವಾದರೂ ನಡುವೆ ತಟ್ಟನೆ ಎಚ್ಚರಾದರೆ ಆವತ್ತು ನೋಡಿದ ತಲೆದಿಂಬಿನ ಚಿತ್ರ ಮೂಡಿ, ತನ್ನನ್ನ ಯಾಕಾಗಿ ಇವಳು ಕ್ಷಮಿಸಬೇಕು ಎಂಬಲ್ಲಿಗೆ ಬಂದು ನಿಲ್ಲುತ್ತಿತ್ತು. ಪಕ್ಕದಲ್ಲಿ ಹೊರಳಿದ ಸದ್ದಾದರೂ ಈಗ ತಲೆದಿಂಬು ತನ್ನ ಮುಖಕ್ಕೆ ಬರಬಹುದೇ ಎಂದು ಎದೆ ಢವಢವಗುಡುತ್ತಿತ್ತು. ಮೆತ್ತಗೆ ಅತ್ತ ಹೊರಳಿ ನೋಡಿದರೆ ನಿರಾತಂಕ ನಿದ್ದೆಯಲ್ಲಿರುವವಳ ಮುಖ ಕಂಡು ಹಾಗೇ ಬಳಸಿಕೊಂಡು ನಿರಾಳವಾಗುತ್ತಿದ್ದ. ಆಗ ಒಮ್ಮೊಮ್ಮೆ ಎಚ್ಚರಾಗುವ ಅವಳು ಯಾಕೆ ನಿದ್ದೆ ಬರ್ಲಿಲ್ವಾ? ಅಂತ ವಿಚಾರಿಸಿದರೆ 'ಇಲ್ಲ ಬರ್ತಾ ಇದೆ' ಅಂತ ಕಣ್ಣು ಮುಚ್ಚಿಕೊಳ್ಳುತ್ತಿದ್ದ.

ಆವತ್ತು ಎಲ್ಲಾ ಕೆಲಸ ಮುಗಿಯುವಾಗ ಹನ್ನೊಂದಾಗಿತ್ತು. ಅವನ ಪಕ್ಕದಲ್ಲಿ ಒರಗಿಕೊಂಡವಳು ಅವನ ಹಸ್ತದಲ್ಲಿ ತನ್ನ ಹಸ್ತವನ್ನು ಹೆಣೆಯುತ್ತ 'ರೀ... ಒಂದು ಮಾತು ಕೇಳ್ತೀನಿ, ಪ್ರಾಮಾಣಿಕವಾಗಿ ಉತ್ತರಿಸ್ಬೇಕು' ಅಂದಳು. 'ಏನದು? ಕೇಳು' ಅಂದ. 'ನೀವಿನ್ನೂ ತಾತನ ಸಂಗತಿ ಮರೆತಿಲ್ಲ...' ಸಿಕ್ಕಿಬಿದ್ದವನಂತೆ, 'ಏನು ಮಾತಾಡ್ತಿದೀಯ? ಯಾವ ಸಂಗತಿ?' ಕೇಳಿದ. 'ಈಗಿತ್ಲಾಗಿ ಹಲವು ರಾತ್ರಿ ಕೇಳಿಸ್ಕೊಂಡಿದೀನಿ, ನೀವು ತಲೆದಿಂಬು ಬೇಡವೆ... ಎಸಿ... ಎಸಿ... ಅಂತ ಗದರಿಸ್ತಿರತೀರ. ಏನೋ ಇದೆ. ನನ್ನ ಹತ್ತಿರವೂ ಹೇಳಕೊಳಲ್ವಾ?' ದನಿಯ ಆರ್ದ್ರತೆ, ಕಣ್ಣಿನ ಆರ್ತತೆಗೆ ಕರಗಿಹೋದ. 'ನೀನು... ನೀನು ನನ್ನನ್ನೇ ಸ್ವೀಕರಿಸಿಕೊಂಡ್ಯಲ್ಲಾ...' ಮುಂದೆ ಹೇಳಲಾರದೆ ತೊದಲಿದ. 'ಓ... ಅದಾ?' ಅವಳು ಅವನ ಮುಖವನ್ನು ನಿರೀಕ್ಷಿಸಿದಳು. ಹತ್ತಿರ ಜರುಗಿ ಅವನೆದೆಯಮೇಲೆ ಅಂಗೈಯನ್ನಿಟ್ಟುಕೊಂಡು 'ಕೇಳಿ, ಎರಡನೇ ರಾತ್ರಿ ನಿಜಕ್ಕೂ ನಾನು ಹರಿತವಾದ ಚೂರಿಯನ್ನಡಗಿಸಿಟ್ಟುಕೊಂಡು ಬಂದಿದ್ದೆ. ನೀವೊಂದು ಮಾತು ಹೇಳಿದಿರಿ. ನೆನಪಿಗೆ ಬಂತಾ? ನಿಮ್ಮ ಶಾಲೇಲೂ ಆಮೇಲೆ ಉಪಾಯವಾಗಿ ವಿಚಾರಿಸ್ದೆ, ಮನಸಿಗೆ ಸಮಾಧಾನವಾಯ್ತು. ಪರಸ್ಪರರದ್ದು ಗೊತ್ತಿದ್ದ ನಿಮ್ಮನ್ನೆ ಆರಿಸ್ಕೊಂಡೆ...' ಸ್ವಲ್ಪ ಜರುಗಿದವಳು ಸೀರೆಯನ್ನು ನಿಧಾನವಾಗಿ ಹೊಕ್ಕಳಿಂದ ಕೆಳಗೆ ಜಾರಿಸಿದಳು. ಅವನ ಅಂಗೈಯನ್ನು ಅಲ್ಲಿರಿಸಿಕೊಂಡಳು. 'ನಿಜವೇನೇ!...' ಆತ ಮುದಗೊಂಡ. ಹೌದು ಅಂತ ತಲೆಯಾಡಿಸುತ್ತ ಅವಳು ಸಂಭ್ರಮಿಸಿದಳು.

---

### ಬನವಾಸಿ ವೆಂಕಟೇಶ ದೀಕ್ಷಿತ

ಲೇಖಕರು ಪತ್ರಿಕೆಗಳಲ್ಲಿ ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ. ಬಿ.ಎಸ್ಸಿ. ಪದವೀಧರರು. ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ವೃತ್ತಿಜೀವನದ ಆರಂಭ. ಬಳಿಕ ಭಾರತೀಯ ಸೇನೆಯಲ್ಲಿ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ನಂತರ ದೂರಸಂಪರ್ಕ ಇಲಾಖೆಯಲ್ಲಿ ಉಪಮಹಾಪ್ರಬಂಧಕರಾಗಿ ನಿವೃತ್ತರಾಗಿದ್ದಾರೆ. ಪ್ರಕಟಿತ ಕಥಾ ಸಂಕಲನ 'ಕಾವಡಿ'.